ಕಿತ್ತುಕೊಂಡು ಬೇಗ ಸೈಕಲ್ ಮೇಲೆ ಅವನ ಮನೆಯ ಕಡೆಗೆ ತೆರಳಿದ್ದ.

ಮನೆಯ ಬಾಗಿಲು ತೆಗೆದ ತನ್ನ ತಾಯಿಗೆ ಸುಧಾ ಈ ವರದಿ ಒಪ್ಪಿಸುತ್ತಿದ್ದಾಗಲೇ ಅವರ ನೆರೆಮನೆಯ ಮೂರ್ತಿಗಳು ಗೇಟ್ ಬಳಿ ಬಂದು, 'ಸುಧಾ ನೀನು ರಸ್ತೆಯಲ್ಲಿ ಮಾತಾಡ್ತಾ ನಿಂತಿದ್ದೆಯಲ್ಲ, ಅವನು ಶ್ರೀರಾಮ್ ಅಲ್ವಾ?' ಎಂದು ಕೇಳಿದರು. ಇವಳು ಹೌದು ಎಂದು ತಲೆ ಆಡಿಸಿದಳು.

'ನೀವು ಇಬ್ಬರು ಬೇರೆ ಬೇರೆ ಸ್ಕೂಲ್ ಅಲ್ವಾ?' ಎಂಬ ಪ್ರಶ್ನೆಗೂ ತಲೆ ಆಡಿಸಿ ಉತ್ತರಿಸಿದಳು.

'ಮತ್ತೆ ಏನು ಮಾತಾಡ್ತಾ ನಿಂತಿದ್ದಿರಿ ಬೀದಿಯಲ್ಲಿ?'

ಸುಧಾ ಉತ್ತರಿಸುವುದಕ್ಕೆ ಮೊದಲೇ ಅವಳ ತಾಯಿ 'ಶ್ರೀರಾಮ್‌ನ ಅಮ್ಮ ನನ್ನನ್ನು ಅವರ ಮನೆಗೆ ಬರಲು ಹೇಳಿ ಕಳುಹಿಸಿದರು. ಅದನ್ನೇ ಇವಳ ಬಳಿ ಹೇಳಿದನಂತೆ' ಎಂದರು.

'ಅಷ್ಟೇನಾ, ಆದ್ರು ಬಹಳ ಹೊತ್ತು' ಮೂರ್ತಿಯವರು ಎನ್ನುತ್ತಿದ್ದಂತೆಯೇ, 'ಒಲೆ ಮೇಲೆ ಹಾಲು ಇಟ್ಟಿದ್ದೆ' ಎಂದು ಬಾಗಿಲು ಹಾಕಿ ಸುಧಾಳನ್ನು ಒಳಗೆ ಎಳೆದೊಯ್ದರು.

'ಇದೊಂದು ಕಮ್ಮಿ ಇತ್ತು. ಇನ್ನು ಊರಿಗೆಲ್ಲ ಹೇಳಿಕೊಂಡು ಬರ್ತಾರೆ. ಹೆಂಗಸರಿಗಿಂತ ಹೆಚ್ಚು ರೆಕ್ಕೆಪುಕ್ಕ ಸೇರಿಸಿ ಸುದ್ದಿ ಹಬ್ಬಿಸುವ ಸುದ್ದಿ ಹಸಿವಿನ ಮಲ್ಲ ಈ ಮೂರ್ತಿ! ನೋಡು ಸುಧಾ, ನಾಳೆಯಿಂದ ರಸ್ತೆಯಲ್ಲಿ ಯಾವ ಹುಡುಗನ ಜೊತೆಯೂ ಮಾತನಾಡಬೇಡ. ಹಾಗೆ ಆಡಲೇಬೇಕಿದ್ದರೆ, ಅವನನ್ನ ಮನೆಗೆ ಬರಲು ಹೇಳು. ಇನ್ನೊಬ್ಬರ ಬಾಯಿಗೆ ಸುಮ್ಮನೆ ಆಹಾರ ಆಗುವುದು ಬೇಡ' ಎಂದಿದ್ದರು.

'ಅಮ್ಮಾ, ಅದೂ ಅವನು ಸಂಜೆ ಐದುವರೆಗೆ ಪುಸ್ತಕ ವಾಪಸ್ ಕೊಡಲು ಅಲ್ಲೇ ರಸ್ತೆ ಹತ್ತಿರ ಬರ್ತೀನಿ ಅಂತ ಹೇಳಿದಾನೆ' ಸುಧಾ ಹೇಳಿದಾಗ, ಅವಳ ತಾಯಿ 'ಬರ್ಲಿ, ನಾನೇ ಆಚೆ ಹೋಗಿ ಅವನನ್ನ ಮನೆಗೆ ಕರೀತೀನಿ. ನೀನು ಒಳಗೇ ಇರು. ಈಗಿನ ಕಾಲದ ಹುಡುಗಿಯರಿಗೆ ಧೈರ್ಯ ಜಾಸ್ತಿ ಆಗ್ಹೋಗಿದೆ' ಎಂದಿದ್ದರು.

ಶ್ರೀರಾಮ್‌ನ ತಾಯಿ ಕೂಡ ಒಮ್ಮೆ ಮನೆಗೆ ಬಂದು, 'ನೀವು ಅವನನ್ನು ಮನೆ ಒಳಗೆ ಕರೆದು ಒಳ್ಳೆಯ ಕೆಲಸ ಮಾಡಿದಿರಿ. ಅವನಿಗೆ ನಾಚಿಕೆ ಜಾಸ್ತಿ. ಆದರೆ ಹುಡುಗ ಮುಂಡೇವಕ್ಕೆ ಸೂಕ್ಷ್ಮ ರೀತಿ, ನೀತಿ ಒಂದು ತಿಳಿಯುವುದಿಲ್ಲ' ಎಂದಿದ್ದರು. ಅನಂತರದ ದಿನಗಳಲ್ಲಿ ಶ್ರೀರಾಮ್ ಕೊಟ್ಟಿದ್ದ ಕೆಲವು ನೋಟ್ಸ್ ಮತ್ತು ಪ್ರಶ್ನೋತ್ತರಗಳ ಪರಿಣಾಮವಾಗಿ ಎಸ್‌ಎಸ್‌ಎಲ್‌ಸಿಯಲ್ಲಿ ಸುಧಾಳಿಗೆ ಒಳ್ಳೆಯ ಅಂಕಗಳು ಬಂದಿದ್ದವು.

ಸುಧಾ, ತನ್ನ ಕಾಲೇಜು ಮೆಟ್ಟಲು ಹತ್ತದ ತಾಯಿಯು ಆ ಸಂದರ್ಭವನ್ನು ನಿಭಾಯಿಸಿದ ರೀತಿಯನ್ನು ಮೆಚ್ಚುಗೆಯಿಂದ ಅನೇಕ ಬಾರಿ ನೆನೆಸಿಕೊಳ್ಳುತ್ತಿದ್ದಳು. ಅಂದಿನ ಸಮಾಜವು ಮೂರ್ತಿಯವರಂಥವರನ್ನು ತನ್ನ ಒಂದು ಅವಿಭಾಜ್ಯ ಅಂಗ ಎಂಬಂತೆ ನಡೆಸಿಕೊಳ್ಳುತ್ತಿದ್ದ ರೀತಿ ಇಂದು ಆಶ್ಚರ್ಯಕರವಾಗಿ ಕಾಣಿಸುತ್ತಿತ್ತು. ಮೂರ್ತಿಯವರು ಅಂದು ಹಾಗೆ ಮಾಡಿದ್ದು 'ತನ್ನ ಮೇಲಿನ ಕಾಳಜಿಯಿಂದ ಇರಬಹುದೇ?' ಎಂಬ ಅನುಮಾನವು ಹಲವು ಬಾರಿ ಸುಧಾಳ ಮನದಲ್ಲಿ ಸುಳಿದಾಡುತ್ತಿತ್ತು.

ಸುಧಾ ಕಾಲೇಜಿನಲ್ಲಿ ಓದುತ್ತಿರುವಾಗ, ಒಮ್ಮೆ ತಂದೆಯವರು ಅಣ್ಣನನ್ನು ತರಾಟೆಗೆ ತೆಗೆದುಕೊಂಡಿದ್ದರು. ಆಗ ಅವನು ಕೊನೆಯ ವರ್ಷದ ಪದವಿ ತರಗತಿಯಲ್ಲಿದ್ದ. ಮೊದಲು ಅದಕ್ಕೆ ಕಾರಣ ಗೊತ್ತಾಗಿರಲಿಲ್ಲ. ಕೊನೆಗೆ 'ಆ ಸಿಗರೇಟ್ ಸೇದುವವನ ಜೊತೆ ನಿನ್ನ ಮಾತುಕತೆಗೆ ಇಂದೇ ಕೊನೆ. ನಾಳೆಯಿಂದ ಅವನ ಜೊತೆ ನೀನು ಕಾಣಿಸಿಕೊಳ್ಳಬಾರದು' ಎಂದು ತಂದೆ ಹೇಳಿದ್ದರು.

ಅಣ್ಣ ಬೇಸರದಿಂದ 'ಅವನು ನನ್ನ ಒಳ್ಳೆಯ ಸ್ನೇಹಿತ ಅಪ್ಪ, ಪ್ರಯೋಗಶಾಲೆಯಲ್ಲಿ ಇಬ್ಬರೂ ಒಟ್ಟಿಗೆ ಪ್ರಯೋಗಗಳನ್ನು ಮಾಡಬೇಕು, ರೆಕಾರ್ಡ್‌ಗಳನ್ನು ಒಟ್ಟಿಗೆ ಬರೆದುಕೊಡಬೇಕು. ಇನ್ನು ಮಾತಾಡಬೇಡ ಅಂದರೆ ಹೇಗೆ?' ಎಂದು ಸಮರ್ಥಿಸಿಕೊಳ್ಳುತ್ತಿದ್ದ. ಅತ್ತ ಕೋಲೂ ಮುರಿಯದೆ, ಹಾವೂ ಸಾಯದೆ ಇಬ್ಬರು ಒಂದು ವಾರ ಮಾತನಾಡಿರಲಿಲ್ಲ.

ಕೆಲಸಕ್ಕೆ ಸೇರಿದ ಮೇಲೆ ಅಣ್ಣನು ಸಿಗರೇಟ್ ಸೇದುವುದನ್ನು ಅಭ್ಯಾಸ ಮಾಡಿಕೊಂಡಿದ್ದ. ಆಗ ನಿವೃತ್ತಿಯ ಹತ್ತಿರ ಬಂದಿದ್ದ ತಂದೆಯವರು ಏನೂ ಹೇಳಲಾಗದೆ ಚಡಪಡಿಸಿದ್ದರು. ತಮ್ಮ ಹೆಂಡತಿಯ ಬಳಿ ತಮ್ಮ ಹತಾಶ ಪರಿಸ್ಥಿತಿಯನ್ನು ಹಂಚಿಕೊಳ್ಳುತ್ತಿದ್ದರು. ಮನಃಶಾಸ್ತ್ರವನ್ನು ಓದುತ್ತಿದ್ದ ಸುಧಾಳಿಗೆ ಅಣ್ಣನ ಬಂಡಾಯ ಪ್ರವೃತ್ತಿ ಅರ್ಥವಾಗಿತ್ತು. ಅನಂತರದ ದಿನಗಳಲ್ಲಿ ಅದು 'ನಾನು ಸಿಗರೇಟ್ ಸೇದುತ್ತಲೇ ತಂದೆತಾಯಿಯರನ್ನು ನೋಡಿಕೊಳ್ಳುತ್ತಿದ್ದೇನೆ' ಎಂಬ ಅಹಂಗೆ ಬದಲಾಗಿತ್ತು.

ಅವನಿಗೆ ಅಪ್ಪನ ಮೇಲೆ ಕೋಪ ಇತ್ತೇ ಹೊರತು ಉಳಿದವರ ಮೇಲಲ್ಲ. ತಾಯಿಯ ಜೊತೆ ಹಾಗೂ ತಂಗಿಯ ಜೊತೆ ಮೊದಲಿನಂತೆ ಪ್ರೀತಿ ವಿಶ್ವಾಸಗಳಿಂದ ನಡೆದುಕೊಳ್ಳುತ್ತಿದ್ದ. ಇದನ್ನು ಸುಧಾಳು ಕಂಡುಕೊಂಡಿದ್ದಳು. ಹಾಗಾಗಿ ಅವಳೂ ಮೊದಲಿನಂತೆಯೇ ಇದ್ದುಬಿಟ್ಟಳು. ಹಬ್ಬದ ದಿನಗಳಲ್ಲಿ ಎಲ್ಲರಿಗೂ ಹೊಸ ಬಟ್ಟೆಗಳನ್ನು ತಂದುಕೊಡುತ್ತಿದ್ದ; ತಂದೆಗೂ ಕೂಡ! ಆದರೆ ಅವರಿಗೆ ಅದನ್ನು ನೇರವಾಗಿ ಕೊಡುತ್ತಿರಲಿಲ್ಲ. ಅದನ್ನು ಅಮ್ಮನಿಗೆ ಏನೂ ಹೇಳದೆ ಕೊಟ್ಟುಬಿಡುತ್ತಿದ್ದ.

'ನೀನೇ ಅವರಿಗೆ ಕೊಡಬಾರದೇನೋ, ಅವರಿಗೂ ಸಂತೋಷವಾಗುತ್ತೆ' ಎಂದು ಅಮ್ಮ ಹೇಳುತ್ತಿದ್ದರು.

'ಪರವಾಗಿಲ್ಲಮ್ಮಾ, ನೀನೇ ಕೊಟ್ಟುಬಿಡು. ನನಗೆ ಸ್ವಲ್ಪ ಕೆಲಸವಿದೆ, ಆಚೆ ಹೋಗಿ ಬರ್ತೀನಿ' ಎಂದು ಮನೆಯಿಂದ ಹೊರನಡೆಯುತ್ತಿದ್ದ.

ಸುಧಾಳ ಹುಟ್ಟುಹಬ್ಬಕ್ಕೆ ಅವಳನ್ನೇ ಕರೆದುಕೊಂಡು ಹೋಗಿ 'ಕಾಲೇಜಿಗೆ ಹೋಗ್ತಾ ಇದ್ದೀಯ ಒಳ್ಳೆ ಡ್ರೆಸ್ ಹಾಕ್ಕೋ' ಎಂದು, ಅವಳಿಗೆ ಬೇಕಾದ ಒಳ್ಳೆಯ ಸಿದ್ಧ ಉಡುಪನ್ನು ಕೊಡಿಸುತ್ತಿದ್ದ. ಕಾಲೇಜಿನ ಗೆಳತಿಯರ ಜೊತೆ ಹುಟ್ಟುಹಬ್ಬ ಆಚರಿಸಲು ಪಾಕೆಟ್ ಮನಿ ಕೂಡ ಸುಧಾಳಿಗೆ ನೀಡುತ್ತಿದ್ದ.

ಇದನ್ನೆಲ್ಲಾ ನೋಡುತ್ತಿದ್ದ ಸುಧಾಳಿಗೆ, ಅಣ್ಣ ಆವೇಶದಲ್ಲಿ ತನ್ನ ಪ್ರತಿರೋಧವನ್ನು ತಂದೆಯ ಮೇಲೆ ತೋರಿಸಿಬಿಟ್ಟಿದ್ದಾನೆ. ಈಗ ಅದರಿಂದ ಹೊರಬರಲು ಒದ್ದಾಡುತ್ತಿದ್ದಾನೆ; ಅದು ಅವನನ್ನು ಇನ್ನಷ್ಟು ಹತಾಶನನ್ನಾಗಿ ಮಾಡುತ್ತಿದೆ ಅನ್ನಿಸಿತ್ತು. ಆದರೆ ಇನ್ನು ಓದುತ್ತಿರುವ ತಾನು ಏನಾದರೂ ಸಲಹೆ ಕೊಟ್ಟು, ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದರೆ, ಅಮ್ಮ ಒಬ್ಬರಿಗೆ ನಿಭಾಯಿಸಲು ಆಗುವುದಿಲ್ಲ ಎಂದುಕೊಂಡು ಸುಮ್ಮನಾದಳು. ಇದಕ್ಕೆ ಏನಾದರೂ ಸಾಧುವಾದ ಯೋಜನೆಯನ್ನು ರೂಪಿಸಬೇಕು ಎಂದು ಆಗಿಂದಾಗ ಚಿಂತಿಸುತ್ತಲೇ ಇದ್ದಳು. ತನ್ನ ಮನಃಶಾಸ್ತ್ರದ ಓದಿನಲ್ಲಿ ಇಂಥ ಪರಿಸ್ಥಿತಿಯ ನಿರ್ವಹಣೆಯ ಬಗ್ಗೆ ವಿವರಗಳನ್ನು ಬೇರೆ ಬೇರೆ ಆಕರ ಗ್ರಂಥಗಳಿಂದ ಓದಿಕೊಳ್ಳುತ್ತಿದ್ದಳು.

ತಮ್ಮಿಬ್ಬರ ಮದುವೆಯ ಅನಂತರ ಒಮ್ಮೆ ತೌರುಮನೆಗೆ ಬಂದಿದ್ದಾಗ ಸುಧಾಳನ್ನು ಅತ್ತಿಗೆ ತಮ್ಮ ಕೋಣೆಯೊಳಗೆ ಕರೆದುಕೊಂಡುಹೋಗಿ 'ಇವರು ಮಾವನವರ ಬಳಿ ಮಾತನಾಡದೆ ಮುಜುಗರ ಪಡುತ್ತಿದ್ದಾರೆ. ನಿನ್ನ ಮಾತು ಕೇಳುತ್ತಾರೆ. ಆಫೀಸಿನಿಂದ ಬಂದ ಮೇಲೆ ಇವರನ್ನು ಕೂರಿಸಿಕೊಂಡು ಸಾವಧಾನವಾಗಿ ಮಾತನಾಡು, ಪ್ಲೀಸ್' ಎಂದು ಕೇಳಿಕೊಂಡಿದ್ದರು.

ಅಣ್ಣ ತಂಗಿಯರಿಗೆ ದೀರ್ಘ ಮಾತುಕತೆ ನಡೆಯಿತು. ತಂಗಿಯ ಮನವರಿಕೆಯ, ಸಾಂತ್ವನದ ಮಾತಿಗೆ ಅವನು ಸ್ಪಂದಿಸಿದ. ಮನೆಯಲ್ಲಿರುವ ಶೀತಲ ವಾತಾವರಣವನ್ನು ತಿಳಿಗೊಳಿಸಲು ಒಪ್ಪಿಕೊಂಡ. ಆದರೆ ಅದನ್ನು ಹೇಗೆ ನಿಭಾಯಿಸುವುದು ಎಂದು ಅವನಿಗೆ ಹೊಳೆಯಲಿಲ್ಲ.

'ಇಷ್ಟು ದಿನ ಬಿಗುಮಾನ ತೋರಿಸಿ ಈಗ ನಾನು ಹೇಗೆ ಮಾತಾಡಿಸಲಿ. ಅವರು ಮಾತನಾಡದೆ ಇದ್ದರೆ?' ಕೇಳಿದ.

ಸುಧಾ ತನ್ನ ವಿಶೇಷ ಓದಿನ ಜ್ಞಾನದ ಹಿನ್ನೆಲೆಯಿಂದ ಅವನಿಗೆ ಹೇಗೆ, ಏನು ಮಾಡಬೇಕೆಂದು ತಿಳಿಸಿದಳು. ಅವನು ಕೋಣೆಯಿಂದ ಹೊರಗೆ ಬಂದ.

ಒಂದು ಕೈಚೀಲವನ್ನು ತೆಗೆದುಕೊಂಡು ಬಾಗಿಲ ಬಳಿ ನಿಂತು, 'ಅಪ್ಪಾ, ಸುಧಾ ಬಂದಿದಾಳೆ ಏನಾದ್ರು ಸ್ಪೆಷಲ್ ಅಡುಗೆ ಮಾಡಿಸೋಣ. ಮಾರ್ಕೆಟ್‌ಗೆ ಹೋಗಿ ತರಕಾರಿ, ಹಣ್ಣು ತರೋಣ ಬರ್ತೀರಾ?' ಎಂದು ಕರೆದ. ಸುಧಾಳನ್ನು ಬಿಟ್ಟು ಉಳಿದವರೆಲ್ಲರೂ ಆಶ್ಚರ್ಯದಿಂದ ಅವನತ್ತ ನೋಡಿದರು. ಅವನ ತಂದೆಯೂ ಮೊದಲು ಗಲಿಬಿಲಿಗೊಂಡರು. ತಕ್ಷಣ ಸಾವರಿಸಿಕೊಂಡು, 'ನಡೆಯಪ್ಪ, ಹೋಗೋಣ' ಎಂದು ಅಂಗಿಯ ಗುಂಡಿಯನ್ನು ಹಾಕಿಕೊಳ್ಳುತ್ತಾ ತಮ್ಮ ಚಪ್ಪಲಿಯನ್ನು ಮೆಟ್ಟಿಕೊಂಡರು. ಅಣ್ಣ, ತಂಗಿಯತ್ತ ಕೃತಜ್ಞತೆಯ ನೋಟ ಬೀರಿ ಹೊರನಡೆದ. ಸುಧಾಳ ಮುಖದಲ್ಲಿ ಮುಗುಳುನಗೆ ಕಾಣಿಸಿಕೊಂಡಿತು. ತಾಯಿ ಹಾಗೂ ಅತ್ತಿಗೆ ಅವಳನ್ನು ಅಪ್ಪಿಕೊಂಡರು.

ತನ್ನ ಬಹುದಿನಗಳ ಯೋಜನೆ, ಅಸಾಧ್ಯ ಎಂದುಕೊಂಡಿದ್ದ ಯೋಜನೆ, ಹೀಗೆ ಸುಸೂತ್ರವಾಗಿ ಯಶಸ್ವಿಯಾಗಿ ಕಾರ್ಯಗತಗೊಂಡಿದ್ದು ಅವಳಿಗೆ ಸಂತೋಷಕ್ಕಿಂತ ಹೆಚ್ಚಾಗಿ ಆತ್ಮವಿಶ್ವಾಸವನ್ನು ಹೆಚ್ಚಿಸಿಬಿಟ್ಟಿತ್ತು. ಹೀಗೆಯೇ ತನ್ನ ಮತ್ತೊಂದು